ಸಂಯುಕ್ತ ಕರ್ನಾಟಕ 13/03/07, ಪುಟ ಸಂಖ್ಯೆ: 02

# ಸೂರ್ಯನಿಗೇ ಟಾರ್ಚ್



ದೇವನಹಳ್ಳಿ ಪಟ್ಟಣದ ಗಿರಿಯಮ್ಮ ಸರ್ಕಲ್ ಬಳಿ ಬೂದಿಗೆರೆ ರಸ್ತೆಯ ಬಿ.ಆರ್. ಅಂಬೇಡ್ಕರ್ ಭವನದ ಮುಂದೆ ಹಗಲಿನಲ್ಲಿ ಉರಿಯುತ್ತಿರುವ ವಿದ್ಯುತ್ ದೀಪದ ದೃಶ್ಯ...

**ದೇವನಹಳ್ಳಿ/ವಿಜಯಪುರ:** ದೇವನಹಳ್ಳಿ ಪಟ್ಟಣದ ಗಿರಿಯಮ್ಮ ಸರ್ಕಲ್ ಬಳಿ ಬೂದಿಗೆರೆ ರಸ್ತೆಯ ಡಾ. ಬಿ.ಆರ್. ಅಂಬೇಡ್ಕರ್ ಭವನದ ಮುಂದೆ ಹಗಲಿನಲ್ಲಿ ಉರಿಯುತ್ತಿರುವ ವಿದ್ಯುತ್ ದೀಪ ಆರಿಸುವುದನ್ನು ಪುರಸಭೆ ಮರೆತಂತಿದೆ. ರಾಜ್ಯಾದ್ಯಂತ ವಿದ್ಯುತ್ ಅಭಾವ ಇದ್ದರೂ ಇಲ್ಲಿನ ಅಧಿಕಾರಿಗಳಿಗೆ ವಿದ್ಯುತ್ ಉಳಿಸುವ ಕಾರ್ಯ ಮಾಡಬೇಕು ಎಂಬ ಚಿಂತನೆಯೇ ಇಲ್ಲದಾಗಿದೆ. ಪಟ್ಟಣದಲ್ಲಿ ಕೆಲವು ಕಡೆ ವಿದ್ಯುತ್ ದೀಪಗಳೇ ಇಲ್ಲ. ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದಾರೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ. ಇನ್ನೂ ಮುಂದೆಯಾದರು ಹಗಲಿನಲ್ಲಿ ಉರಿಯುವ ವಿದ್ಯುತ್ ದೀಪಗಳನ್ನು ಆರಿಸಬೇಕು ಎಂದು ಸದಾರ್ವಜನಿಕರು ಒತ್ತಾಯಿಸಿದ್ದಾರೆ. ಬೇಸಿಗೆಯಲ್ಲಿ ವಿದ್ಯುತ್ ಕಣ್ಣುಮುಚ್ಚಾಲೆ ಆಡುತ್ತಿದೆ. ವಿದ್ಯುತ್ ಅಭಾವದಿಂದ ಲೋಡ್ ಶೆಡ್ಡಿಂಗ್ ಎಂದು ಹೇಳುತ್ತಾರೆ ಇಂತಹ ಪರಿಸ್ಥಿತಿಯಲ್ಲಿ ಪಟ್ಟಣದ ಮುಖ್ಯ ಸರ್ಕಲಿನಲ್ಲಿ ವಿದ್ಯುತ್ ದೀಪ ಉರಿಯುತ್ತಿದ್ದರೈ ಪುರಸಭೆ ಅಧಿಕಾರಿಗಳು ದೀಪಗಳ ಆರಿಸದಿರುವುದು ವಿಷಾದಕರ ಸಂಗತಿ.

ಸಂಯುಕ್ತ ಕರ್ನಾಟಕ, 13/03/14, ಪುಟ ಸಂಖ್ಯೆ 02

# ಇಂದು ವಿದ್ಯುತ್ ವ್ಯತ್ಯಯ

**ಬೆಂಗಳೂರು:** ವಿದ್ಯುತ್ ಸರಬರಾಜು ಕಂಪನಿಯು ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಂಡಿರುವ ಕಾರಣ ನಗರದ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

220/66/11ಕೆ.ವಿ 'ಹೂಡಿ ಎಂಯುಎಸ್‌ಎಸ್.' ವಿದ್ಯುತ್ ಉಪ-ಕೇಂದ್ರದಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ನಿರ್ವಹಿಸುವುದರಿಂದ ಮಾ.13ರಂದು ಬೆಳಿಗ್ಗೆ 10.ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

**ಮಂಗಳವಾರ**

ವಿದ್ಯುತ್ ಸರಬರಾಜು ಕಂಪನಿಯು ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಂಡಿರುವ ಕಾರಣ ನಗರದ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಮಾ.14 ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ 66/11ಕೆ.ವಿ 'ಬಾಣಸವಾಡಿ, ಸಿ ಸ್ಟೇಷನ್ ಮತ್ತು ಎಲ್.ಆರ್.ಬಂಡೆ ಎಂಯುಎಸ್‌ಎಸ್'. ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ನಿರ್ವಹಿಸುವುದರಿಂದ ವಿದ್ಯುತ್ ವ್ಯತ್ಯಯ ಉಂಟಾಗುವುದು.

# ನಿರಂತರ ವಿದ್ಯುತ್ ಜ್ಯೋತಿ ಕಾಮಗಾರಿಯಲ್ಲಿ ಅವ್ಯವಹಾರ: ಆರೋಪ

**ತುರುವೇಕೆರೆ:** ರಾಜ್ಯಾದ್ಯಂತ ನಿರ್ಮಾಣವಾಗುತ್ತಿರುವ ನಿರಂತರ ವಿದ್ಯುತ್ ಜ್ಯೋತಿ ಕಾಮಗಾರಿಗೆ ಸರ್ಕಾರದ ಬೆಲೆಗಿಂತ ದುಪ್ಪಟ್ಟು ಹಣವನ್ನು ಗುತ್ತಿಗೆದಾರರಿಗೆ ಟೆಂಡರ್ ಆಗಿ ನೀಡಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಐದರಿಂದ ಆರು ಕೋಟಿ ರೂಪಾಯಿಗಳು ನಷ್ಟ ಉಂಟಾಗುತ್ತಿದೆ ಎಂದು ಶಾಸಕ ಎಂ.ಟಿ.ಕೃಷ್ಣಪ್ಪ ಆರೋಪಿಸಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದು ಸುದ್ದಿ ಗೋಷ್ಟಿಯಲ್ಲಿ ಮಾತನಾಡಿದರು.

ಈಗಾಗಲೇ ನಿರ್ಮಾರ್ಣವಾಗುತ್ತಿರುವ ತಾಲೂಕು ಸೇರಿದಂತೆ ರಾಜ್ಯದೆಲ್ಲೆಡೆಯ ನಿರಂತರ ವಿದ್ಯುತ್ ಜ್ಯೋತಿ ಕಾಮಗಾರಿಗೆ ಬಳಸಿರುವ ಕಂಬ, ಮೆಯಿನ್ಸ್ ತಂತಿ ಹಾಗೂ ಇನ್ನಿತರ ವಸ್ತುಗಳು ಗುಣಮಟ್ಟತೆಯಿಂದ ಕೂಡಿಲ್ಲ ಸಂಪೂರ್ಣ ಕಳಪೆ ಕಾಮಗಾರಿ ಯಾಗಿರುವುದರಿಂದ ಇದು ಬಹಳ ವರ್ಷಗಳ ಕಾಲ ಬಾಳಿಕೆ ಬರದು.

ಅಲ್ಲದೆ ಗೇವೈರ್ ಅನ್ನು ಸುಮಾರು ನಾಲ್ಕು ಅಡಿ ಆಳದಲ್ಲಿ ಮುಚ್ಚ ಬೇಕು. ಆದರೆ ಇವರು ಕೇವಲ ಒಂದು ವರೆ ಅಡಿ ಗುಂಡಿ ತೆಗೆದು ಮುಚ್ಚುತ್ತಿದ್ದಾರೆ. ಈ ಸ್ಥಳದಲ್ಲಿ ಬಾರವಿರುವ ಬಸ್ಸು, ಲಾರಿಯೋ ಹಾಗೂ ಇನ್ನಿತರ ವಾಹನಗಳು ಸಂಚರಿಸಿದರೆ ಇವುಗಳ ಒತ್ತಡಕ್ಕೆ ಗೇವೈರ್ ಸಿಡಿಯುವ ಸಾಧ್ಯತೆಯಿದ್ದು ಇದರಿಂದ ಹೆಚ್ಚಿನ ಪ್ರಾಣಹಾನಿ ಉಂಟಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದುಂದು ವಿವರಿಸಿದರು.

ಬರದ ಹಿನ್ನಲೆಯಲ್ಲಿ ತಾಲ್ಲೂಕಿನಲ್ಲಿ ನಿರ್ಮಾಣವಾಗಿರುವ ಮಾಯಸಂದ್ರ ಮತ್ತು ದಬ್ಬೇಘಟಟ್ಟ ಹೋಬಳಿಗಳ ಗೋಶಾಲೆಗಳ ಜೊತೆಗೆ ಕಸಬ ಮತ್ತು ದಂಡಿನಶಿವರ ಹೋಬಳಿಗೂ ವಿಸ್ತರಿಸ ಬೇಕು. ಈ ಸಂಬಂಧ ಈಗಾಗಲೇ ಜಿಲ್ಲಾಧಿಕಾರಿಗಳಿಗೂ ಸಹ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲವೆಂದು ದೂರಿದರು.

ಸರಿಯಾಗಿ ಮಳೆ ಬಾರದೆ ತೀವ್ರ ಬರಗಾಲಕ್ಕೆ ತುತ್ತಾಗಿ ಕಂಗೆಟ್ಟಿರುವ ರೈತರಿಗೆ ಬೆಳೆ ಪರಿಹಾರವಾಗಿ ಒಂದು ಎಕರೆಗೆ 25000 ರೂಪಾಯಿಗಳು ಶೀಘ್ರವೇ ನೀಡ ಬೇಕು ಎಂದು ಒತ್ತಾಯಿಸಿದರು. ಸುದ್ದಿ ಗೋಷ್ಟಿಯಲ್ಲಿ ಪಟ್ಟಣದ ಜೆಡಿಎಸ್ ಘಟಕದ ಅಧ್ಯಕ್ಷ ಸುರೇಶ್ ಇತರರು ಇದ್ದರು.